ದಿಃ 22-08-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಮುಂದುವರೆದ ಪಾಟೀ ಸವಾಲು ಶ್ರೀ. ಆರ್.ಸಿ ವಾದಿಗಳ ಪರ ವಕೀಲರಿಂದಃ

ನನ್ನ ತಾಯಿ ಕೊಂಡುಕೊಂಡರು ಎಂದು ಹೇಳುವ ಜಮೀನಿಗೆ ಸಂಬಂಧಪಟ್ಟ 1965 ರಿಂದ ನಂತರದ ಹಳೇ ಪಹಣಿಗಳನ್ನು ಈ ದಾವೆಯಲ್ಲಿ ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ. ಸದರಿ ಜಮೀನಿನಲ್ಲಿ ಸರ್ವಮಂಗಳಮ್ಮರವರು ಎಂದಿಗೂ ಉಳುಮೆ ಮಾಡಲಿಲ್ಲ ಎಂದರೆ ಸರಿಯಲ್ಲ. ಸದರಿ ಸರ್ವಮಂಗಳಮ್ಮರವರು ಮಧುಗಿರಿ ತಾಲ್ಲೂಕಿನ ಕೊಡಗೇನಹಳ್ಳಿ ಹೋಬಳಿಯ ಬೂದೇನಹಳ್ಳಿ ಗ್ರಾಮದವರು ಎಂದರೆ ಗೊತ್ತಿಲ್ಲ. ಸದರಿ ವಿಳಾಸವನ್ನು ನಿಡಿ-26 ರ ನನ್ನ ತಾಯಿಯ ಕ್ರಯ ಪತ್ರದಲ್ಲಿ ಸ್ಪಷ್ಟವಾಗಿ ಬರೆದಿದೆ ಎಂದರೆ ಸರಿ. ಸದರಿ ಜಮೀನು ಯಾರಿಗೆ ಸೇರಿದ್ದು ಎಂದು ತೋರಿಸಲು 1965 ಕ್ಕಿಂತ ಹಿಂದಿನ ದಾಖಲೆಗಳಾದ ಆರ್.ಆರ್ 5 ಮತ್ತು 6 ನ್ನು ಈ ದಾವೆಯಲ್ಲಿ ನಾನು ಹಾಜರುಪಡಿಸಿಲ್ಲ.

ನನ್ನ ತಾಯಿಗೆ 3 ಜನ ಮಕ್ಕಳು. ನನ್ನ ಅಣ್ಣನಾದ ದೊಡ್ಡರಂಗಪ್ಪರವರು ತೀರಿಕೊಂಡಿದ್ದಾರೆ. ನನ್ನ ಇನ್ನೊಬ್ಬ ಅಣ್ಣನ ಹೆಸರು ಚಿಕ್ಕರಂಗಪ್ಪ. ನಾನು ಮತ್ತು ನನ್ನ ಅಣ್ಣಂದಿರು ಅವಿದ್ಯಾವಂತರು. ಸರ್ವ ಮಂಗಳಮ್ಮರವರಿಗೆ ಜಮೀನು ಹೇಗೆ ಬಂದಿತ್ತು ಎಂಬ ವಿಚಾರವನ್ನು ನಾನು ಮತ್ತು ನನ್ನ ಸಹೋದರರು ತಿಳಿದುಕೊಳ್ಳಲಿಲ್ಲ. ನನ್ನ ತಾಯಿಗೆ ಮಾರಾಟವಾದ ಆಸ್ತಿಯಲ್ಲಿ ಸರ್ವಮಂಗಳಮ್ಮರವರಿಗೆ ಸಂಪೂರ್ಣ ಹಕ್ಕು ಇರಲಿಲ್ಲ ಎಂದರೆ ಗೊತ್ತಿಲ್ಲ. ಸರ್ವಮಂಗಳಮ್ಮರವರಿಗೆ ಸಂಪೂರ್ಣ ಅಧಿಕಾರ ಇಲ್ಲದಿದ್ದ ವಿಚಾರ ನಮಗೆ ಗೊತ್ತಿದ್ದರೂ ಅದನ್ನು ಮರೆಮಾಚಿ ಜಮೀನನ್ನು ಕೊಂಡುಕೊಂಡೆವು ಎಂದರೆ ಸರಿಯಲ್ಲ. ದಾವಾ ಐಟಂ ನಂ.2 ಮತ್ತು 3 ನ್ನು ನನ್ನ ತಾಯಿ ಕೊಂಡುಕೊಳ್ಳುವ ಮುಂಚಿತವಾಗಿ ಹಾಗೂ ಇಲ್ಲಿಯವರೆಗೂ ಸಹ ಸರ್ವಮಂಗಳಮ್ಮರವರ ಕುಟುಂಬದವರಾದ ವಾದಿಗಳೇ ಉಳುಮೆ ಮಾಡುತ್ತಿದ್ದಾರೆ ಎಂದೆರ ಸಾಕ್ಷಿ ಮೊದಲು ಸರಿ ಎಂದು ಹೇಳಿ ನಂತರ ದಾವಾ ಐಟಂ ನಂ.2 ಮತ್ತು 3 ರಲ್ಲಿ ಈಗ ನಾವೇ ಉಳುಮೆ ಮಾಡುತ್ತಿದ್ದೇವೆ ಎಂದು ನುಡಿಯುತ್ತಾರೆ.

ರೈತಾಪಿ ಕುಟುಂಬವಾದ ನಮಗೆ ದಾವಾ ಐಟಂ ನಂ.2 ಮತ್ತು 3 ಕ್ಕೆ ಸಂಬಂಧಪಟ್ಟಂತೆ ಕೇಂದ್ರ ಸರ್ಕಾರದ ಯೋಜನೆಯಡಿ ಯಾವುದೇ ಪರಿಹಾರ ಬಂದಿರುವುದಿಲ್ಲ. ದಾವಾ ಐಟಂ ನಂ.2 ಮತ್ತು 3 ರಲ್ಲಿ ನಾವು ಟೊಮೆಟೊ ಬೆಳೆಯನ್ನು ಬೆಳೆಸಿದ್ದೇವೆ. ದಾವಾ ಐಟಂ ನಂ.2 ಮತ್ತು 3 ರ ಕ್ರಯವಾದಾಗ ನನ್ನ ತಾಯಿಯೊಂದಿಗೆ ನಾನು ಹೋಗಿರಲಿಲ್ಲ. ನಿಡಿ-26 ರಲ್ಲಿ ಹೇಳಿರುವಂತೆ ಸಾಕ್ಷಿಗಳ ಸಮಕ್ಷಮ ಯಾವುದೇ ಕ್ರಯದ ಹಣದ ವ್ಯವಹಾರ ನಡೆದಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿ ಅಥವಾ ನಾನು ದಾವಾ ಐಟಂ ನಂ.2 ಮತ್ತು 3 ಕ್ಕೆ ಸಂಬಂಧಪಟ್ಟಂತೆ ಯಾವುದೇ ಬೆಳೆ ಸಾಲವನ್ನು ಪಡೆದಿರುವುದಿಲ್ಲ. ನನ್ನ ತಾಯಿ ತೀರಿಕೊಂಡು 14 ವರ್ಷಗಳು ಕಳೆದಿವೆ ಎಂದರೆ

ಸರಿ. ನನ್ನ ತಾಯಿ ತೀರಿಕೊಂಡ ನಂತರ ನನ್ನ ಹೆಸರಿಗೆ ದಾವಾ ಐಟಂ ನಂ.2 ಮತ್ತು 3ರ ಖಾತೆಯನ್ನು ವರ್ಗಾಯಿಸಿಕೊಳ್ಳಲು ತೊಂದರೆ ಇರಲಿಲ್ಲ. ದಾವಾ ಐಟಂ ನಂ. 2 ಮತ್ತು 3ಕ್ಕೆ ಸಂಬಂಧಪಟ್ಟಂತೆ ನಾನು ಯಾವುದೇ ಕಂದಾಯ ರಸೀದಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಹೇಳಿರುವ ಅಂಶಗಳಿಗೆ ಅನುಗುಣವಾಗಿ ಕಂದಾಯ ರಸೀದಿಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ದಾವಾ ಐಟಂ ನಂ.2 ಮತ್ತು 3 ರಲ್ಲಿ ಸರ್ವಮಂಗಳಮ್ಮರವರೊಂದಿಗೆ ವಾದಿಗಳಿಗೂ ಹಕ್ಕು ಇರುವ ವಿಚಾರ ಗೊತ್ತಿದ್ದರೂ ಆ ಸ್ವತ್ತುಗಳು ನನ್ನ ತಾಯಿಯ ಹೆಸರಿಗೆ ಕ್ರಯವಾದವು ಎಂದು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಗೊತ್ತಿಲ್ಲ. ದಾವಾ ಐಟಂ ನಂ.2 ಮತ್ತು 3ರಲ್ಲಿ ವಾದಿಗಳಿಗೂ ಹಕ್ಕು ಇರುವ ಕಾರಣ ನಿಡಿ-26ರ ಕ್ರಯ ಪತ್ರವು ವಾದಿಗಳಿಗೆ ಅನ್ವಯಿಸುವುದಿಲ್ಲ ಎಂದರೆ ಸರಿಯಲ್ಲ. ದಾವಾ ಐಟಂ ನಂ.2 ಮತ್ತು 3ರಲ್ಲಿ ವಾದಿಗಳು ಜಂಟಿ ಸ್ವಾಧೀನದಲ್ಲಿರುವ ವಿಚಾರ ನನಗೆ ಗೊತ್ತಿದ್ದರೂ ನಾವೇ ಸ್ವಾಧೀನದಲ್ಲಿದ್ದೇವೆ ಎಂದು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ. ಇದೆ

ಸಹಿ/-

ಪ್ರ.ಸಿ.ನ್ಯಾ ಮತ್ತು ಜೆಎಂಎಫ್‌ಸಿ,

ಗೌರಿಬಿದನೂರು